ಕೃಷಿ ಬಿಡಿ, ಮನೆ ಮಟ್ಟದಲ್ಲೂ ಇದನ್ನು ಬೆಳೆಸಲು ಆಗುತ್ತಿಲ್ಲ. ಹೀಗಾಗಿ ತಮ್ಮ ಅಚ್ಚುಮೆಚ್ಚಿನ ಟೊಮೆಟೊಕ್ಕೆ ಇವರು ಸದಾ ಕೊಳ್ಳುಗರೇ. ಪೇಟೆಯಿಂದ ತರುವ ಟೊಮೆಟೊದಲ್ಲಿ ವಿಷಾಂಶ ಇರುವುದು ನಿಸ್ಸಂಶಯ. ಮನೆಮಟ್ಟದಲ್ಲಿ ಟೊಮೆಟೊ ಬೆಳೆಸಲು ಸಾಧ್ಯವಾದರೆ ಈ ಅಪಾಯ ನಿವಾರಿಸಬಹುದೆಂಬುದು ಇವರಿಗೂ ಗೊತ್ತು.

ಬಾಡು ರೋಗದ ಬಾಧೆ ತಪ್ಪಿಸಲು ವಿಜ್ಞಾನಿಗಳು ಒಂದು ಉಪಾಯ ಹೂಡಿದ್ದಾರೆ. ಅದುವೇ ಸರ್ಜರಿ ಮೂಲಕ ಗಿಡದ ಅಡಿಭಾಗದ ಬದಲಾವಣೆ. ಅಂದರೆ, ಕಸಿ! ಈ ರೋಗವೇ ಅಂಟದ, ಬೇರೆ ಟೊಮೆಟೊ ಸಂಬಂಧಿ ಅಡಿಗಿಡಕ್ಕೆ ಟೊಮೆಟೊ ಗಿಡದ ತಲೆಯನ್ನು ಜೋಡಿಸುವುದೇ ಇವರ ತಂತ್ರ.

## ಕೇಕೃವಿಯ ದಾಪುಗಾಲು

ಇಡೀ ದಕ್ಷಿಣ ಭಾರತದಲ್ಲಿ, ಕೇರಳ ಕೃಷಿ ವಿಶ್ವವಿದ್ಯಾಲಯ (ಕೇಕೃವಿ) ಈ ವಿದ್ಯೆಯಲ್ಲಿ ಪರಿಣಿತಿ ಬೆಳೆಸಿಕೊಂಡಿದೆ. ಡಾ. ಸಿ. ನಾರಾಯಣ ಕುಟ್ಟಿ ಅವರ ವಿಶೇಷ ಶ್ರಮದ ಫಲವಿದು. ತ್ರಿಶೂರಿನ ಮನ್ನುತ್ತಿಯಲ್ಲಿರುವ ಕೇಕೃವಿಯ ತೋಟಗಾರಿಕಾ ಕಾಲೇಜಿನಲ್ಲಿ ಇವರು ಅಸೋಸಿಯೇಟ್ ಡೀನ್. ಕಳೆದ ಮೂರುನಾಲ್ಕು ವರ್ಷಗಳಿಂದ ಕೇಕೃವಿ ಟೊಮೆಟೊದ ಕಸಿ ಗಿಡ ಮಾಡಿ ಕೊಡುತ್ತಿದೆ. ಟೊಮೆಟೊ ಮಾತ್ರವಲ್ಲದೆ, ಬದನೆ, ದೊಣ್ಣೆಮೆಣಸು ಮತ್ತು ಮೆಣಸಿನ ಗಿಡಗಳಲ್ಲೂ ಈ 'ಬುಡಾಂತರ' ನಡೆಯುತ್ತಿದೆ.

ಈ ಕಸಿ ತುಂಬ ನಾಜೂಕಿನದು. ಮಾವು, ಗೇರು, ಹಲಸಿನ ಗಿಡಗಳಂತೆ ಇವುಗಳ ಕಾಂಡ ಗಟ್ಟಿ ಇರುವುದಿಲ್ಲವಲ್ಲ. ಕಸಿ ಮಾಡಿ ಬಹಳ ದಿನ ಗ್ರಾಹಕರನ್ನು ಕಾದು ಗಿಡ ಇಟ್ಟುಕೊಳ್ಳುವ ಹಾಗೆಯೂ ಇಲ್ಲ. ಕೋಳಿಮೊಟ್ಟೆಯನ್ನು ಇಟ್ಟು ಆಚೀಚೆ ಒಯ್ಯುವ ಟ್ರೇ ನೋಡಿದ್ದೀರಲ್ಲಾ, ಅಂಥದೇ ಪ್ರೋ ಟ್ರೇಗಳಲ್ಲಿರುವಾಗಲೇ ಟೊಮೆಟೊ ಗಿಡಕ್ಕೆ ಕಸಿ ಮಾಡುತ್ತಾರೆ. ಕೇಕೃವಿ ಇದಕ್ಕಾಗಿ ಬಳಸುತ್ತಿರುವುದುದು ಹಳ್ಳಿಗಳಲ್ಲಿ ಅಪೂರ್ವವಾಗಿ ತರಕಾರಿಯಾಗಿ ಬಳಸುವ ಬದನೆ ಜಾತಿಯ ಕಾಡುಗಿಡ, ಕುದನೆಯ (ಸೋಲೇನಮ್ ಟೋರ್ವಮ್) ಅಡಿ ಗಿಡ.

ಕಸಿ ಗಿಡಕ್ಕೆ ಬೀಜದಿಂದ ಮಾಡಿದ ಗಿಡಕ್ಕಿಂತ ಹೆಚ್ಚು ಖರ್ಚಿದೆ. ಆದರೆ ಇದರ ದೊಡ್ಡ ಪ್ರಯೋಜನ ಎಂದರೆ, ಯಾವುದೇ ಸನ್ನಿವೇಶದಲ್ಲೂ ಬಾಡುರೋಗಕ್ಕೆ ಅಂಜಬೇಕಿಲ್ಲ. ಮಾತ್ರವಲ್ಲ, ಕೃಷಿಕರು ತಮಗೆ ಬೇಕಾದ ಯಾವುದೇ ತಳಿಯ ಗಿಡಕ್ಕೆ ಈ ಥರ ಕಸಿ ಮಾಡಿಸಿಕೊಳ್ಳಬಹುದು.

## ಆದೇಶ ಕೊಟ್ಟು ಕಾಯಬೇಕು

ಕಸಿಗಿಡ ಕೃಷಿಗೆ ಸಂಬಂಧಿಸಿದಂತೆ ಸದ್ಯಕ್ಕೆ ಹಲವು ಅಡ್ಡಿ, ಅಡಚಣೆಗಳೂ ಇವೆ. ಇವನ್ನು ಸಿದ್ಧ ಮಾಡಿ ಮಾರಾಟಕ್ಕೆ ಇಟ್ಟುಕೊಳ್ಳಲು ಬರುವುದಿಲ್ಲ. ಬೇಕಾದವರು ಮುಂಗಡ ಆದೇಶ ಕೊಟ್ಟು, ಕಾಯಬೇಕು. ಒಂದು ಬ್ಯಾಚಿನ ಗಿಡ ತಯಾರಿಗೆ ಕನಿಷ್ಠ ಎರಡೂವರೆ ತಿಂಗಳು ಬೇಕು. ಇವುಗಳ ಸಾಗಾಟವೂ ಸುಲಭವಲ್ಲ. ಇಷ್ಟೆಲ್ಲ ಇತಿಮಿತಿಗಳಿದ್ದರೂ ಕೇಕೃವಿಗೆ ಕಸಿಗಿಡಗಳಿಗೆ ದೊಡ್ಡ ಆರ್ಡರುಗಳು ಬರುತ್ತಲೇ ಇವೆ. ರಾಜ್ಯದ ಇತರ ಭಾಗಗಳ ಕೃಷಿಕರಿಂದ, ಕರ್ನಾಟಕ, ತಮಿಳುನಾಡುಗಳಿಂದ ಮತ್ತು ಕೆಲವು ಕೃಷಿಸಂಬಂಧಿ ಸಂಸ್ಥೆಗಳಿಂದ. ಹಾಗೆ ನೋಡಿದರೆ, ಕೇರಳಕ್ಕಿಂತಲೂ ಇಲ್ಲಿಂದ ಟೊಮೆಟೊ ಕಸಿ ಗಿಡ ಹೆಚ್ಚು ಪೂರೈಕೆಯಾಗುವುದು ತಮಿಳುನಾಡಿಗೆ.

ಕೇಕೃವಿ ವರ್ಷಕ್ಕೆ ಸುಮಾರು 3ರಿಂದ 4 ಲಕ್ಷ ಕಸಿಗಿಡ ಮಾಡಿಕೊಡುತ್ತಿದೆ. ಈ ಪೈಕಿ ಅತಿ ಹೆಚ್ಚು ಟೊಮೆಟೊದ್ದು. ಬದನೆಗೆ ಎರಡನೆಯ ಸ್ಥಾನ. ಬೇರೆಬೇರೆ ಲೆಕ್ಕ ಇಡದಿದ್ದರೂ ಈ ವರೆಗೆ ಟೊಮೆಟೊದ 3ರಿಂದ 4 ಲಕ್ಷ ಕಸಿಗಿಡ ಇಲ್ಲಿಂದ ಪೂರೈಕೆ ಆಗಿರಬಹುದು.

ಕೇರಳದ ಕಡಿಮೆ ಮಳೆಯ ಜಿಲ್ಲೆ ಪಾಲಕ್ಕಾಡಿನ ಕಪ್ಪು ಮಣ್ಣಿನ ಮೂರು ಪಂಚಾಯತುಗಳಲ್ಲಷ್ಟೇ ಈವರೆಗೆ ಟೊಮೆಟೊ ಕೃಷಿ ಇತ್ತು. ಕೇರಳದಲ್ಲಿ ಅತಿ ಹೆಚ್ಚು ಬಳಕೆಯಾಗುವ ತರಕಾರಿ ಇದು. ಇದರಲ್ಲಿ ಹೆಚ್ಚಿನ ಪಾಲೂ ಪೂರೈಕೆಯಾಗುವುದು ನೆರೆಯ ತಮಿಳುನಾಡಿನದು. ಇದರಲ್ಲಿ ರಾಸಾಯನಿಕ ಕೀಟನಾಶಕ ಬಳಸದೆ ಇರುವಂಥದ್ದು ಇಲ್ಲವೇ ಇಲ್ಲ ಎನ್ನಬಹುದು!

ಕಸಿ ವಿದ್ಯೆ ಮತ್ತು ಕೇಕೃವಿಯ ಕೃಪೆಯಿಂದ, ಈಗ ಕೇರಳದ ಕೆಲವು ಸಾವಯವ ಕೃಷಿಕರೂ ಟೊಮೆಟೊ ಕೃಷಿ ಮಾಡತೊಡಗಿದ್ದಾರೆ. ಬರೇ ಮನೆಯ ಮಟ್ಟಿಗೆ ಅಲ್ಲ, ವಾಣಿಜ್ಯ ಮಟ್ಟದಲ್ಲೂ ಬೆಳೆಸುತ್ತಿದ್ದಾರೆ. ಇವನ್ನು ತಮಿಳುನಾಡಿನ ರಾಶಿರಾಶಿ ಟೊಮೆಟೋದ ನಡುವೆಯೂ ಇವರಿಗೆ ಹೆಚ್ಚಿನ ಬೆಲೆಗೆ ಮಾರಲು ಸಾಧ್ಯವಾಗಿದೆ.

## ಮನೆ ಮನೆಯಲ್ಲಿ ಎಲೆಕೋಸು

ಕೇವಲ ಚಳಿ ಪ್ರದೇಶಕ್ಕಷ್ಟೇ ಸೀಮಿತವಾಗಿದ್ದ ಹೂಕೋಸು, ಎಲೆಕೋಸು ಕೃಷಿಯನ್ನು ಕೇರಳದ ಮನೆಗಳ ಹಿತ್ತಿಲಿಗೆ ತಂದದ್ದೂ ಇದೇ ಕೇಕೃವಿ, ಇದೇ

### ಉತ್ತಮ ಸ್ವಉದ್ಯೋಗಾವಕಾಶ

ಟೊಮೆಟೊ ವರ್ಗದ ಗಿಡಗಳ ಕಸಿ ವಿದ್ಯೆ ಕಲಿಯುವುದು ಅಂಥಾ ಕಷ್ಟದ ಕೆಲಸವೇನಲ್ಲ. ಒಳ್ಳೆ ದೃಷ್ಟಿ, ತಾಳ್ಮೆ, ಏಕಾಗ್ರತೆ, ನೈಪುಣ್ಯ ಇರುವ ಯಾರೂ ಇದನ್ನು ಒಲಿಸಿಕೊಳ್ಳಬಹುದು.

ಕೇಕೃವಿಯಲ್ಲಿ ಮೂವರು ಪರಿಣತ ಯುವತಿಯರು ಸೇರಿ ದಿನಕ್ಕೆ 2,000 ಗಿಡ ಉತ್ಪಾದಿಸುತ್ತಾರೆ. 'ನಮ್ಮ ಕೇವೀಕೆಯ ಸಿಬಂದಿ ದಿನಕ್ಕೆ ತಲಾ 250–300 ಮಾಡಬಲ್ಲರು' ಎನ್ನುತ್ತಾರೆ ಮಣಿಕಂಠನ್.

ಪ್ರೋ–ಟ್ರೇಯಲ್ಲಿ ತರಕಾರಿ ಗಿಡ, ಟೊಮೆಟೊ ಕಸಿ ಗಿಡ ತಯಾರಿಯನ್ನೇ ಸ್ವೋದ್ಯೋಗವಾಗಿ ತೆಗೆದುಕೊಳ್ಳಲು ಉತ್ತಮ ಅವಕಾಶವಿದೆ. ಆರಂಭದಲ್ಲಿ ಜನರಿಗೆ ಇದರ ಪರಿಚಯ ಆಗುವವರೆಗೆ ಕೃಷಿ ವಸ್ತುಪ್ರದರ್ಶನ, ಸಭೆಗಳಲ್ಲಿ ಭಾಗವಹಿಸಿ ಪ್ರಚಾರ ಮಾಡಬೇಕಾದೀತು. ಉಳಿದಂತೆ ಸಾಮಾಜಿಕ ಮಾಧ್ಯಮಗಳ ಈ ಕಾಲದಲ್ಲಿ ಇಂಥ ಮಾಹಿತಿಯನ್ನು ಹಬ್ಬಿಸುವುದು ಐದಾರು ವರ್ಷ ಹಿಂದೆ ಇದ್ದಷ್ಟು ಕಷ್ಟವಲ್ಲ.



ಕೇಕೃವಿಯ ಕಸಿ ಗಿಡ ಬಳಸಿ ಟೊಮೆಟೊ ಕೃಷಿಯಲ್ಲಿ ಒಳ್ಳೆ ಉತ್ಪಾದನೆ ಪಡೆಯುತ್ತಿರುವ ಮಾಲಾದ ಕೃಷಿಕ ರಂಜಿತ್.

ಜಿಲ್ಲೆಯ ಶಾಲೆಗಳಿಗೆ ಮತ್ತು ಬೇಕಾದಷ್ಟು ಜಾಗ ಇಲ್ಲದವರಿಗೆ ಗ್ರೋ ಬ್ಯಾಗುಗಳಲ್ಲಿ ಟೊಮೆಟೊ ಬೆಳೆಸುವುದನ್ನು ತೋರಿಸಿಕೊಟ್ಟರೆ ಇದು ಎಳೆಯರಿಗೂ, ನಗರಿಗರಿಗೂ ತರಕಾರಿ ಕೃಷಿಯ ರುಚಿ ಹತ್ತಿಸಬಲ್ಲುದು.



ಪ್ರೋ ಟ್ರೇಯಲ್ಲಿ ಇದ್ದಾಗಲೇ ಬದನೆಯ ಅಡಿ ಗಿಡಕ್ಕೆ ಟೊಮೆಟೊ ಗಿಡದ ತಲೆಯ ಜೋಡಣೆ. ಜೋಡಿಸಿದ ಭಾಗಕ್ಕೆ ಕ್ಲಿಪ್ ಅಳವಡಿಕೆ.